# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

| ಸಂಪುಟ –೧೬೧<br>**Volume - 161** | ಬೆಂಗಳೂರು, ಬುಧವಾರ, ೨೭, ಮೇ, ೨೦೨೬ (ಜ್ಯೇಷ್ಠ, ೦೬, ಶಕವರ್ಷ, ೧೯೪೮)<br>**BENGALURU, WEDNESDAY, 27, MAY, 2026 ( JYAISTHA , 06, SHAKAVARSHA, 1948)** | ಸಂಚಿಕೆ ೧೦೦<br>**Issue 100** |
|---|---|---|


## ಭಾಗ ೩

## ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

## ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು.

### <u>ಅಧಿಸೂಚನೆ</u>

**ಸಂಖ್ಯೆ: ಕರಾಕಾಸೇಪ್ರಾ : 09/ಎಡಿಎಮ್/2026, ದಿನಾಂಕ: 27.05.2026**

ವಾಹನ ಚಾಲಕರ ಹುದ್ದೆಗಳಿಗಾಗಿ ಅಭ್ಯರ್ಥಿಗಳ ನೇರ ನೇಮಕಾತಿ

**ಭೌತಿಕವಾಗಿ(ಆಫ್‌ಲೈನ್) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25.06.2026**

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು, ಇಲ್ಲಿ **02 ವಾಹನ ಚಾಲಕರ ಹುದ್ದೆಗಳಿಗೆ** ನೇರ ನೇಮಕಾತಿಗಾಗಿ ಅರ್ಜಿಯನ್ನು ಸಲ್ಲಿಸಲು ಈ ಕೆಳಕಂಡಂತೆ ನಿಗದಿಪಡಿಸಿರುವ ಅಗತ್ಯ ಮತ್ತು ಇತರೆ ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳು ಭೌತಿಕವಾಗಿ (ಆಫ್‌ಲೈನ್) ಅರ್ಜಿಯನ್ನು ಸಲ್ಲಿಸಬಹುದೆಂದು ಅಧಿಸೂಚಿಸಲಾಗಿದೆ.

**ಈ ಅಧಿಸೂಚನೆಯು ಅಥವಾ ನೇಮಕಾತಿಯು ರಿಟ್ ಅರ್ಜಿ ಸಂಖ್ಯೆ 200448/2025 c/w 17968/2025 ಮತ್ತು 3145/2023 ಪ್ರಕಾರ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.**

1. **<u>ಖಾಲಿ ಹುದ್ದೆಗಳ ವರ್ಗೀಕರಣ</u>:–**

**ಉಳಿದ ಮೂಲ ವೃಂದದ 02 ಹುದ್ದೆಗಳು**

| ಪ್ರವರ್ಗ | ಮೀಸಲು ರಹಿತ | ಒಟ್ಟು |
|---|---|---|
| **ಸಾಮಾನ್ಯ ಅಭ್ಯರ್ಥಿ** | **01** | **01** |
| **ಪರಿಶಿಷ್ಟ ಜಾತಿ** | **01** | **01** |
| **ಪರಿಶಿಷ್ಟ ಪಂಗಡ** | **–** | **–** |

| | | |
|---|---|---|
| **ಪ್ರವರ್ಗ– I** | – | – |
| **ಪ್ರವರ್ಗ–II A** | – | – |
| **ಪ್ರವರ್ಗ–II B** | – | – |
| **ಪ್ರವರ್ಗ–III A** | – | – |
| **ಪ್ರವರ್ಗ–III B** | – | – |
| **ಒಟ್ಟು** | **02** | **02** |

❖ **ಟಿಪ್ಪಣಿ:**

ಮೇಲಿನ ವರ್ಗೀಕರಣವನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2026 ದಿನಾಂಕ: 13.05.2026ರ ಪ್ರಕಾರ ಮಾಡಲಾಗಿದೆ.

**ವೇತನ ಶ್ರೇಣಿ** (ರೂ.ಗಳಲ್ಲಿ)**:–**

34,100-800-35,700-900-39,300-1,000-43,300-1,125-47,800-1,250-52,800-1,375-58,300-1,500-64,300-1,650-67,600

## 2. ನೇಮಕಾತಿಯ ವಿಧಾನ:–

ಅಭ್ಯರ್ಥಿಗಳ ಆಯ್ಕೆಯನ್ನು ಕಾಲ ಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸೇವಾ ಮತ್ತು ನೇಮಕಾತಿ ಷರತ್ತುಗಳು (ನಿಯಮಗಳು), 1996 ಮತ್ತು ಕಾಲ ಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳು, 2016 ಇವುಗಳ ಅನುಸಾರವಾಗಿ ಮಾಡಲಾಗುವುದು.

**ಈ ಕೆಳಗಿನ ಸರ್ಕಾರದ ಸುತ್ತೋಲೆಗಳು / ಅಧಿಸೂಚನೆಗಳ ಪ್ರಕಾರ :**

| ಕ್ರಮ ಸಂಖ್ಯೆ | ಸರ್ಕಾರದ ಸುತ್ತೋಲೆಗಳು / ಅಧಿಸೂಚನೆಗಳು | ದಿನಾಂಕ | ವಿಷಯ |
|---|---|---|---|
| 1. | ಸಿಆಸುಇ 262 ಸೇನೆನಿ 2025 | 29.01.2026 | ವಯೋಮಿತಿಯಲ್ಲಿ 5 ವರ್ಷಗಳ ಸಡಿಲಿಕೆಯನ್ನು ನೀಡುವ ಬಗ್ಗೆ (ಒಂದು ಬಾರಿಯ ಕ್ರಮವಾಗಿ) |
| 2. | ಸಿಆಸುಇ 19 ಸೇನೆನಿ 2020 | 12.10.2020 | ಸೇವಾನಿರತ ಅಭ್ಯರ್ಥಿಯ ನಿರಾಪೇಕ್ಷಣಾ ಪ್ರಮಾಣ ಪತ್ರದ ಬಗ್ಗೆ. |

## 3. (ಎ) ಕನಿಷ್ಠ ವಿದ್ಯಾರ್ಹತೆ :–

ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕಡ್ಡಾಯವಾಗಿ ತೇರ್ಗಡೆ ಹೊಂದಿರಬೇಕು ಹಾಗೂ ಲಘು ವಾಹನ ಚಾಲನಾ ಜೊತೆಗೆ ಭಾರಿ ಪ್ರಮಾಣದ ಮೋಟರು ವಾಹನ ಚಾಲನೆ ಮಾಡುವ ಚಾಲನಾ ಪರವಾನಿಗೆಯನ್ನು ಮತ್ತು ವಾಹನ ಚಾಲನೆಯಲ್ಲಿ ಅನುಭವವನ್ನು ಹೊಂದಿರಬೇಕು. ಅಭ್ಯರ್ಥಿಯು ಕನ್ನಡ ಭಾಷೆಯನ್ನು ಬಲ್ಲವರಾಗಿರಬೇಕು.

* **ವಿ.ಸೂ**: ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆ ಎಂದರೆ ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ: ಸಿಆಸುಇ 81 ಸೇವನೆ 2017, ದಿನಾಂಕ: 27.02.2018 ರಲ್ಲಿ ಸೂಚಿಸಿದಂತಹ ಕೋರ್ಸುಗಳು.

(ಬಿ) **ನೇಮಕಾತಿಗಾಗಿ ವಯೋಮಿತಿ:–**

ವಾಹನ ಚಾಲಕರ ಹುದ್ದೆಗೆ ಅರ್ಜಿ ಸಲ್ಲಿಸುವ ಎಲ್ಲಾ ಪ್ರವರ್ಗದ ಅಭ್ಯರ್ಥಿಗಳು (ದಿನಾಂಕ 27.05.2026 ರಂತೆ), ಕನಿಷ್ಠ 18 ವರ್ಷಗಳಿಗಿಂತ ಕಡಿಮೆಯಿಲ್ಲದ ಮತ್ತು ಈ ಕೆಳಕಂಡಂತೆ ನಿಗದಿಪಡಿಸಿರುವ ಗರಿಷ್ಟ ವಯೋಮಿತಿಯನ್ನು ಮೀರಿರಬಾರದು:

| ಅಭ್ಯರ್ಥಿಯು ಸೇರಿದ ವರ್ಗ | ಗರಿಷ್ಠ ವಯೋಮಿತಿ |
|---|---|
| ಸಾಮಾನ್ಯ ಅಭ್ಯರ್ಥಿ | 40 ವರ್ಷಗಳು |
| ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ–I | 45 ವರ್ಷಗಳು |

4. **ಅರ್ಜಿ ಶುಲ್ಕ:–**

ಅಭ್ಯರ್ಥಿಯು ಭೌತಿಕವಾಗಿ (ಆಫ್‌ಲೈನ್) ಅರ್ಜಿಯಲ್ಲಿ ಉಲ್ಲೇಖಿಸಿರುವಂತೆ ಯು.ಪಿ.ಐ./ ನೆಟ್ ಬ್ಯಾಂಕಿಂಗ್/ ಡೆಬಿಟ್ ಕಾರ್ಡ್ ಪಾವತಿ ಗೇಟ್‌ವೇ ಮೂಲಕ ಅರ್ಜಿ ಶುಲ್ಕವನ್ನು **ಭಾರತೀಯ ಸ್ಟೇಟ್ ಬ್ಯಾಂಕ್, ಎಸ್.ಎಮ್.ಇ. ಶಾಖೆ, ವಿಲ್ಸನ್ ಗಾರ್ಡನ್, ಬೆಂಗಳೂರು** ಇಲ್ಲಿನ **ಉಳಿತಾಯ ಖಾತೆ ಸಂಖ್ಯೆ: 64071587420, IFSC: SBIN0004932 ಗೆ** ಪಾವತಿಸತಕ್ಕದ್ದು, ಅಭ್ಯರ್ಥಿಯು ಶುಲ್ಕವನ್ನು **ಎಸ್.ಬಿ.ಐ.ನ ಯಾವುದೇ ಶಾಖೆಯಲ್ಲಿ ಪಾವತಿಸಬಹುದು,** ಮತ್ತು ಆನ್‌ಲೈನ್ ಮೂಲಕ ಪಾವತಿಸಿದ್ದಲ್ಲಿ ಚಲನ್‌ನ್ನು ಪಿ.ಡಿ.ಎಫ್.ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.

❖ **ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಶುಲ್ಕ ಈ ಕೆಳಗಿನಂತಿರುತ್ತದೆ** :–

| ಅಭ್ಯರ್ಥಿಯು ಸೇರಿದ ವರ್ಗ | ಅರ್ಜಿ ಶುಲ್ಕ |
|---|---|
| ಸಾಮಾನ್ಯ ಅಭ್ಯರ್ಥಿ | ರೂ.500/- |
| ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ–I. | ರೂ.250/- |

❖ **ಸೂಚನೆಗಳು:–**

(i) ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಜಿಗಳಿಗೆ ಶುಲ್ಕವನ್ನು ಪಾವತಿಸಿದ್ದರೂ ಸಹ, ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಮರುಪಾವತಿಸಲಾಗುವುದಿಲ್ಲ.

(ii) ಕೊನೆಯ ಕ್ಷಣದಲ್ಲಿ ಅರ್ಜಿ ಸಲ್ಲಿಸುವಾಗ ಆಗಬಹುದಾದ ಒತ್ತಡಗಳನ್ನು ತಪ್ಪಿಸಲು ಅಭ್ಯರ್ಥಿಯು ಮುಂಚಿತವಾಗಿಯೇ ಭೌತಿಕವಾಗಿ (ಆಫ್‌ಲೈನ್) ಅರ್ಜಿಯನ್ನು ಸಲ್ಲಿಸುವುದು.

(iii) ಅಭ್ಯರ್ಥಿಯು ದಿನಾಂಕ:25.06.2026ರ ಒಳಗೆ ಶುಲ್ಕವನ್ನು ಪಾವತಿಸಿ, ಅರ್ಜಿಯನ್ನು ಸಲ್ಲಿಸಬೇಕು.

(iv) ನಿಗದಿತ ಅವಶ್ಯಕತೆಗಳನ್ನು ಪೂರೈಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

(v)ಸಂದರ್ಶನಕ್ಕೆ ಕರೆಯಲ್ಪಡುವ ಅಭ್ಯರ್ಥಿಗಳಿಗೆ ಅರ್ಜಿಯಲ್ಲಿ ನೋಂದಾಯಿಸಿರುವ ಇ–ಮೇಲ್/ ಎಸ್.ಎಂ.ಎಸ್./ ವಾಟ್ಸ್‌ಆಪ್ ಮೂಲಕ ಮಾತ್ರ ತಿಳಿಸಲಾಗುವುದು.

## 5. ಸೇವಾ ಪರಿವೀಕ್ಷಣಾ ಅವಧಿ:–

ನೇಮಕಗೊಂಡ ಅಭ್ಯರ್ಥಿಯು ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ.

## 6. ಆಯ್ಕೆ ವಿಧಾನ/ಸಂದರ್ಶನ:–

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 28 ಸೇವನೆ 94 ಬೆಂಗಳೂರು, ದಿ.28.05.1994 ರ ಪ್ರಕಾರ ವಾಹನ ಚಾಲಕರ ನೇರ ನೇಮಕಾತಿ ಮಾಡುವಾಗ ಈ ಕೆಳಕಂಡ ವಿಧಾನಗಳನ್ನು ಅನುಸರಿಸಲಾಗುತ್ತಿದೆ.

- ನೇಮಕಾತಿ ಪ್ರಾಧಿಕಾರ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಅಭ್ಯರ್ಥಿಗಳನ್ನು ಪರಿಗಣಿಸಿ ಅರ್ಹ ಅಭ್ಯರ್ಥಿಗಳನ್ನು ಪೋಲಿಸ್ ಟ್ರೈನಿಂಗ್ ಮತ್ತು ಮ್ಯಾನೇಜ್‌ಮೆಂಟ್ ಸ್ಕೂಲ್ ನಡೆಸುವ ವಾಹನ ಚಾಲಕ ಪರೀಕ್ಷೆಗೆ ಒಳಪಡಿಸಿ ಅದರಲ್ಲಿ ಉತ್ತೀರ್ಣರಾಗಿರುವುದಕ್ಕೆ ದೃಡೀಕರಣ ಪತ್ರ ಪಡೆದು, ಅರ್ಹತೆ ಮತ್ತು ಮೀಸಲಾತಿ ಆದೇಶಗಳನ್ವಯ ಬಿಡುಗಡೆ ಮಾಡಿದ ರಿಕ್ತಸ್ಥಾನಗಳಿಗೆ ಸಮಾನವಾಗಿ ಆಯ್ಕೆ ಪಟ್ಟಿಯನ್ನು ತಯಾರಿಸಲಾಗುವುದು.
- ನೇಮಕಾತಿ ಪ್ರಾಧಿಕಾರ ರಿಕ್ತ ಸ್ಥಾನಗಳನ್ನು ಜಾರಿಯಲ್ಲಿರುವ ಮೀಸಲಾತಿ ಆದೇಶಗಳನ್ವಯ ವಿಂಗಡಿಸಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳನ್ನು ಸೂಚಿಸಿ, 1:5 ಅನುಪಾತದಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಲಾಗುವುದು.
- ತದನಂತರ ತಯಾರಿಸಲಾದ ಪಟ್ಟಿಗಳಲ್ಲಿರುವ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ನಿಗಧಿಪಡಿಸಲಾದ ಅಂಕಗಳು ಗರಿಷ್ಟ– 10, ಕನಿಷ್ಟ – 05 ಅಂಕಗಳು ಪಡೆಯತಕ್ಕದ್ದು.
- ಸಂದರ್ಶನಕ್ಕೆ ಬರುವಾಗ ಅಭ್ಯರ್ಥಿಗಳು ತಮ್ಮ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅಥವಾ ಪ್ಯಾನ್‌ಕಾರ್ಡ್ ಅಥವಾ ಡ್ರೈವಿಂಗ್ ಲೈಸೆನ್ಸ್ ಅಥವಾ ರೇಷನ್‌ಕಾರ್ಡ್ ಅಥವಾ ಪಾಸ್‌ಪೋರ್ಟ್ ಅನ್ನು ಮೂಲ ಪ್ರತಿಗಳೊಂದಿಗೆ ತರತಕ್ಕದ್ದು.
- ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ, ಯುಕ್ತ ವಾಹನ ಚಾಲನಾ ಪರವಾನಗಿ ಮತು ಜಾತಿ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಹಾಜರುಪಡಿಸತಕ್ಕದ್ದು.
- ಅಭ್ಯರ್ಥಿಯ ಉತ್ತಮ ನಡತೆಯ ಬಗ್ಗೆ ಪ್ರಮಾಣ ಪತ್ರಗಳು ಅಂದರೆ, ಅವನು/ಅವಳು ಅಂತಿಮವಾಗಿ ವ್ಯಾಸಂಗ ಮಾಡಿದ ಸಂಸ್ಥೆಯ ಮುಖ್ಯಸ್ಥರಿಂದ ವಿದ್ಯಾಭ್ಯಾಸದ ವಿವರಗಳೊಂದಿಗೆ ಪಡೆದ ಪ್ರಮಾಣಪತ್ರ ಮತ್ತು ಅವನು/ಅವಳು ಚೆನ್ನಾಗಿ ಪರಿಚಯವಿರುವ ಹಾಗೂ ಸಂಬಂಧಿಯಾಗಿರದ ಗೌರವಾನ್ವಿತ ವ್ಯಕ್ತಿಗಳಿಂದ ಪಡೆದ ಪ್ರಮಾಣ ಪತ್ರಗಳನ್ನು ದಾಖಲಾತಿಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

## 7. ಸಾಮಾನ್ಯ ಸೂಚನೆಗಳು :–

ಅಭ್ಯರ್ಥಿಯು ಭೌತಿಕವಾಗಿ (ಆಫ್‌ಲೈನ್) ಅರ್ಜಿಯನ್ನು ಸಲ್ಲಿಸುವ ಮೊದಲು ಎಲ್ಲಾ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು.

ಭೌತಿಕವಾಗಿ (ಆಫ್‌ಲೈನ್) ಮೂಲಕ ಅರ್ಜಿಯನ್ನು ಸಲ್ಲಿಸುವಾಗ, ಅಭ್ಯರ್ಥಿಯು ಅರ್ಹತಾ ಮತ್ತು ಇತರೆ ಮಾನದಂಡಗಳನ್ನು ಪೂರೈಸಿದ್ದಾರೆಂದು ಹಾಗೂ ಒದಗಿಸಿದ ಎಲ್ಲಾ ವಿವರಗಳು ಸರಿಯಾಗಿವೆಯೆಂದು ಖಚಿತಪಡಿಸಿಕೊಳ್ಳಬೇಕು. ಭೌತಿಕವಾಗಿ ಮಾಹಿತಿಯನ್ನು ಒದಗಿಸುವಾಗ ಅಭ್ಯರ್ಥಿಯು ಸಂಬಂಧಪಟ್ಟ ಅಂಕಪಟ್ಟಿಗಳು ಮತ್ತು ಶೈಕ್ಷಣಿಕ ಅರ್ಹತೆ / ಮೀಸಲಾತಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಹೊಂದಿರಬೇಕು.

## 8. ಅರ್ಹತಾ ಷರತ್ತುಗಳು:–

i. ಅಭ್ಯರ್ಥಿಯು ಕಡ್ಡಾಯವಾಗಿ ಭಾರತೀಯ ನಾಗರಿಕನಾಗಿರಬೇಕು.

ii. ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

iii. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಹಾಗೂ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸುವ ಯಾವುದೇ ದೈಹಿಕ ನ್ಯೂನ್ಯತೆ ಇರಬಾರದು. ಒಂದು ವೇಳೆ, ವೈದ್ಯಕೀಯ ಮಂಡಳಿ ಅಭ್ಯರ್ಥಿಯು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢತೆ ಇಲ್ಲ ಎಂದು ಅಭಿಪ್ರಾಯಪಟ್ಟಲ್ಲಿ ಅಂತಹ ಅಭ್ಯರ್ಥಿಯ ನೇಮಕಾತಿಯನ್ನು ರದ್ದುಗೊಳಿಸುವ ಅಧಿಕಾರ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಇರುತ್ತದೆ.

iv. ಅಭ್ಯರ್ಥಿಯ ವಿರುದ್ದ ಯಾವುದೇ ಕ್ರಿಮಿನಲ್ ಪ್ರಕರಣ ಇರಬಾರದು.

## 9. ಸಂದೇಹ ನಿವಾರಣೆಗಾಗಿ ದೂರವಾಣಿ ಸಂಖ್ಯೆ :–

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಯ ದೂರವಾಣಿ ಸಂಖ್ಯೆ :**080–22111729** (ಬೆಳಗ್ಗೆ 09.00 ರಿಂದ ಸಂಜೆ 07.00 ಘಂಟೆವರೆಗೆ – ಕೆಲಸದ ದಿನಗಳಲ್ಲಿ ಮಾತ್ರ)

## 10. ಭೌತಿಕವಾಗಿ (ಆಫ್‌ಲೈನ್) ಅರ್ಜಿಯನ್ನು ಸಲ್ಲಿಸುವ ವಿಧಾನ :–

ಎ) ಅಭ್ಯರ್ಥಿಯು ಅರ್ಜಿಯ ಕುರಿತ ಮಾಹಿತಿಯನ್ನು ರಾಜ್ಯ ಪ್ರಾಧಿಕಾರದ https://karnataka.nalsa.gov.in ನಲ್ಲಿ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ.

ಬಿ) ಅಭ್ಯರ್ಥಿಯು ಭೌತಿಕ (ಆಫ್‌ಲೈನ್) ಮೂಲಕ ಅರ್ಜಿಯನ್ನು **ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯದೇಗುಲ, ಮೊದಲನೇ ಮಹಡಿ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು – 560 027,** ಈ ವಿಳಾಸಕ್ಕೆ ಅಂಚೆ/ಮುದ್ದಾಂ ಕಳುಹಿಸತಕ್ಕದ್ದು.

ಸಿ) ಅಭ್ಯರ್ಥಿಯು ಭೌತಿಕವಾಗಿ ಅರ್ಜಿಯನ್ನು ಸಲ್ಲಿಸುವಾಗ ಅಗತ್ಯವಿರುವ ಮಾಹಿತಿಯನ್ನು ಭರ್ತಿ ಮಾಡಿ, ಉಲ್ಲೇಖಿಸಲಾದ ಸೂಚನೆಗೆ ಅನುಗುಣವಾಗಿ ಶುಲ್ಕವನ್ನು ಪಾವತಿಸತಕ್ಕದ್ದು. ಒಮ್ಮೆ ಸಲ್ಲಿಸಿದ ಅರ್ಜಿಯ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

ಡಿ) ಅಭ್ಯರ್ಥಿಯು ಭೌತಿಕವಾಗಿ ಅರ್ಜಿಯನ್ನು ಸಲ್ಲಿಸುವಾಗ ಸಂವಹನಕ್ಕಾಗಿ ಸಂಬಂಧಿತ ಕಾಲಂಗಳಲ್ಲಿ ಕಡ್ಡಾಯವಾಗಿ ಅವನ ಚಾಲ್ತಿಯಲ್ಲಿರುವ ಅಂಚೆ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐಡಿಯನ್ನು ಒದಗಿಸಬೇಕು. ತಪ್ಪಾದ ಮಾಹಿತಿಯನ್ನು ಒದಗಿಸಿದಲ್ಲಿ ಎಸ್‌ಎಂಎಸ್/ ಇ–ಮೇಲ್/ ವಾಟ್ಸ್‌ಆಪ್ ಮುಖಾಂತರ ಸೂಚನೆ/ಸಂದೇಶಗಳು ಅಭ್ಯರ್ಥಿಗೆ ತಲುಪದಿದ್ದಲ್ಲಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಜವಾಬ್ದಾರರಾಗಿರುವುದಿಲ್ಲ.

ಇ) ಅಭ್ಯರ್ಥಿಯು ಈ ಕೆಳಗಿನ ಮಾಹಿತಿಯನ್ನು ಭೌತಿಕ ಅರ್ಜಿಯ ಜೊತೆಗೆ ಕಡ್ಡಾಯವಾಗಿ ಒದಗಿಸಬೇಕು;

(i) ಆಧಾರ್‌ಕಾರ್ಡ್,

(ii) ಎಸ್.ಎಸ್.ಎಲ್.ಸಿ. ಅಂಕಪಟ್ಟಿ,

(iii) ಲಘು ವಾಹನ ಚಾಲನಾ ಜೊತೆಗೆ ಬಾರಿ ಪ್ರಮಾಣದ ಮೋಟಾರು ವಾಹನ ಅಥವಾ ಸರಕು ಸಾಗಣೆ ಮಾಡುವ ಭಾರೀ ಪ್ರಮಾಣ ವಾಹನವನ್ನು ಚಾಲನೆ ಮಾಡುವ ಚಾಲನಾ ಪರವಾನಿಗೆ ಪತ್ರ. ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಅನ್ವಯಿಸಿದರೆ ಮಾತ್ರ

**ಎಫ್**) ಸಂದರ್ಶನಕ್ಕೆ ಆಯ್ಕೆ ಮಾಡಲಾಗುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ https://karnataka.nalsa.gov.in ಜಾಲತಾಣದಲ್ಲಿ ಪ್ರಕಟಿಸಲಾಗುವುದು.

(i) ಅರ್ಹ ಅಭ್ಯರ್ಥಿಗೆ ಮಾಹಿತಿಯನ್ನು ಭೌತಿಕ ಅರ್ಜಿಯಲ್ಲಿ ನಮೂದಿಸಿರುವ ಇ-ಮೇಲ್ ಐಡಿ ಹಾಗೂ ಮೊಬೈಲ್ ಸಂಖ್ಯೆಗೆ ಇ-ಮೇಲ್/ ಎಸ್‌ಎಂಎಸ್/ ವಾಟ್ಸ್‌ಆಪ್ ಮೂಲಕ ಮತ್ತು ನೋಂದಾಯಿತ ಅಂಚೆ ಮುಖಾಂತರ ಕಳುಹಿಸಲಾಗುತ್ತದೆ.

**ಜಿ**) ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಭೌತಿಕ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಂತಿಮವಾಗಿ ಸಲ್ಲಿಸಿದ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುತ್ತದೆ. **ಕೊನೆಯದಾಗಿ ಸಲ್ಲಿಸಿದ ಅರ್ಜಿಯನ್ನು ಬಿಟ್ಟು ಉಳಿದ ಅರ್ಜಿಗಳು ತಿರಸ್ಕೃತವಾಗುತ್ತವೆ ಮತ್ತು ಈ ಸಂಬಂಧ ಯಾವುದೇ ಕೋರಿಕೆಯನ್ನು ಪರಿಗಣಿಸುವುದಿಲ್ಲ.**

**ಹೆಚ್**) ವಾಹನ ಚಾಲನಾ ಪರೀಕ್ಷೆ/ ಮೌಖಿಕ ಪರೀಕ್ಷೆಗೆ ಕರೆಯಲಾಗುವ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ನಿಗಧಿಪಡಿಸುವ ಸ್ಥಳ ಹಾಗೂ ಸಮಯಕ್ಕೆ ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

## 11. ಮೀಸಲಾತಿ ಕೋರುವ ಅಭ್ಯರ್ಥಿಗಳು ಹೊಂದಿರಬೇಕಾದ ದಾಖಲೆಗಳು:-

| | | | |
|---|---|---|---|
| ಜಾತಿ ಮೀಸಲಾತಿ | (1) | ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕದಂದು ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಹೊಂದಿರಬೇಕು. | |
| | (2) | ಜಾತಿ ಪ್ರಮಾಣ ಪತ್ರದ ನಿಗದಿತ ನಮೂನೆ: | |
| | | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ | ನಮೂನೆ – ಡಿ |

## 12. ಇತರೆ ಮೀಸಲಾತಿಕೋರುವ ಅಭ್ಯರ್ಥಿಗಳು ಹೊಂದಿರಬೇಕಾದ ದಾಖಲೆಗಳು:-

| | |
|---|---|
| ಸೇವಾ ನಿರತ ಅಭ್ಯರ್ಥಿಗಳು | ಆಯ್ಕೆ ಪಟ್ಟಿ ಬಿಡುಗಡೆಯಾದ ತಕ್ಷಣ ಸೇವಾ ನಿರತ ಅಭ್ಯರ್ಥಿಗಳು ನಿರಾಪೇಕ್ಷಣಾ ಪ್ರಮಾಣಪತ್ರ (NOC) ವನ್ನು ನೇಮಕಾತಿ ಆದೇಶ ನೀಡುವ ಮೊದಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿಗೆ ಸಲ್ಲಿಸಬೇಕು. |
| ಭೌತಿಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ ನಂತರ ಪಡೆದ ಜಾತಿ ಪ್ರಮಾಣ ಪತ್ರ ಮತ್ತು ಇತರೆ ಮೀಸಲಾತಿಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. | |

**13**. ಭೌತಿಕ ಅರ್ಜಿಯಲ್ಲಿ ನಮೂದಿಸಿರುವ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಮೂಲ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದರೆ, ಅಂತಹ ಅಭ್ಯರ್ಥಿಯ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುವುದು.

**14**. ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡಿದಂತಾಗುವುದಿಲ್ಲ ಮತ್ತು ಅಭ್ಯರ್ಥಿಯು ನೇಮಕಕ್ಕೆ ಎಲ್ಲಾ ರೀತಿಯಲ್ಲಿ ಸೂಕ್ತ ಮತ್ತು ಅಗತ್ಯವೆಂದು ಪರಿಗಣಿಸಬಹುದಾದ ವಿಚಾರಣೆಗಳ ನಂತರ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ತೃಪ್ತಿ ಹೊಂದದ ಹೊರತು ಯಾವುದೇ ಅಭ್ಯರ್ಥಿಯನ್ನು ಹುದ್ದೆಗೆ ನೇಮಿಸಲಾಗುವುದಿಲ್ಲ.

**15**. ವಾಹನ ಚಾಲಕರ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಯನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ರಾಜ್ಯದ ಯಾವುದೇ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಗೆ ಅವಶ್ಯಕತೆಗನುಗುಣವಾಗಿ ನಿಯೋಜನೆ/ಕಳುಹಿಸಲಾಗುವುದು.

**16**. ನೇಮಕಾತಿ ಪ್ರಕ್ರಿಯೆಯಲ್ಲಿ ಯಾವುದೇ ಅಭ್ಯರ್ಥಿಯು ಪ್ರಭಾವ ಬೀರಲು ಪ್ರಯತ್ನಿಸಿದ್ದಲ್ಲಿ, ಅಂತಹ ಅಭ್ಯರ್ಥಿಯು ನೇಮಕಾತಿಗೆ ಅನರ್ಹನಾಗುತ್ತಾನೆ/ಳೆ.

**17**. ನೇಮಕಾತಿಯ/ ಪರಿಶೀಲನೆ ಹಂತದಲ್ಲಿ ಅಥವಾ ನೇಮಕಾತಿಯ ನಂತರ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳು ಎಂದು ಕಂಡು ಬಂದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ ಅಥವಾ ಅಭ್ಯರ್ಥಿಯು ಯಾವುದೇ ವಸ್ತುನಿಷ್ಠ ಸತ್ಯಗಳನ್ನು ತಿರುಚಿದರೆ ಅಥವಾ ಮೊಟಕುಗೊಳಿಸಿದರೆ, ಅಭ್ಯರ್ಥಿಯ ಉಮೇದುವಾರಿಕೆಯು ರದ್ದುಗೊಳ್ಳುತ್ತದೆ.

**18**. ಸುಳ್ಳು ಅಥವಾ ತಪ್ಪಾದ ಮಾಹಿತಿಯನ್ನು ಒದಗಿಸಿದಂತಹ ಅಭ್ಯರ್ಥಿಯು ಅನರ್ಹತೆಗೆ ಒಳಪಡುವುದಲ್ಲದೆ ಕ್ರಿಮಿನಲ್ ಮೊಕದ್ದಮೆಗೆ ಹೊಣೆಗಾರನಾಗುತ್ತಾನೆ/ಳೆ.

ಗೌರವಾನಿತ ಕಾರ್ಯನಿರ್ವಾಹಕ ಅಧ್ಯಕ್ಷರು,
ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ
ಇವರ ಆದೇಶಾನುಸಾರ

ಸಹಿ/–

**(ಹೆಚ್. ಶಶಿಧರ ಶೆಟ್ಟಿ)**
ಸದಸ್ಯ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ,
ಬೆಂಗಳೂರು.

# ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು.

## "ವಾಹನ ಚಾಲಕ" ರ ಹುದ್ದೆಗೆ ಅರ್ಜಿ ನಮೂನೆ

ಇತ್ತೀಚಿನ ಭಾವಚಿತ್ರ

| | | | | |
|---|---|---|---|---|
| 1. | ಅರ್ಜಿದಾರರ ಹೆಸರು | : | | |
| 2. | ತಂದೆ / ಗಂಡನ ಹೆಸರು | : | | |
| 3. | ಹುಟ್ಟಿದ ದಿನಾಂಕ& ವಯಸ್ಸು | : | | |
| 4. | ಲಿಂಗ | : | | |
| 5. | ರಾಷ್ಟ್ರೀಯತೆ | : | | |
| 6. | ಧರ್ಮ | : | | |
| 7. | ಜಾತಿ&ಆದಾಯ ಪ್ರಮಾಣ ಪತ್ರ (ಪ್ರಮಾಣ ಪತ್ರವನ್ನು ಲಗತ್ತಿಸುವುದು) | : | | |
| 8. | ಶೈಕ್ಷಣಿಕಅರ್ಹತೆ | : | | |
| 9. | ಎಸ್.ಎಸ್.ಎಲ್.ಸಿ. | : | ಉತ್ತೀರ್ಣವಾದ ವರ್ಷ | |
| | | | ಒಟ್ಟು ಅಂಕಗಳು | |
| | | | ಪಡೆದ ಅಂಕಗಳು | |
| | | | ಶೇಖಡವಾರು | |
| 10. | ಲಘು ವಾಹಾನ ಚಾಲನ ಜೊತೆಗೆ ಭಾರಿ ಪ್ರಮಾಣದ ಮೋಟಾರು ವಾಹನ ಚಾಲನೆ ಮಾಡುವ ಚಾಲನಾ ಪರವಾನಿಗೆ ಸಂಖ್ಯೆ & ಪಡೆದ ದಿನಾಂಕ | : | | |
| 11. | ಚಾಲನೆಯಲ್ಲಿ ಪಡೆದಿರುವ ಅನುಭವ (ವರ್ಷಗಳಲ್ಲಿ) ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು. | : | | |
| 12. | ಖಾಯಂ ವಿಳಾಸ | : | | |
| 13. | ಅಂಚೆ ವಿಳಾಸ | : | | |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | |
|---|---|---|---|
| 14. | ಆಧಾರ ಸಂಖ್ಯೆ | : | |
| 15. | ಮೊಬೈಲ್ ಸಂಖ್ಯೆ | : | |
| 16. | ಇ–ಮೇಲ್ ಐ.ಡಿ. | : | |
| 17. | **ಲಗತ್ತಿಸಲಾದ ದಾಖಲೆಗಳು** | : | |
| | ಎ) ಎಸ್.ಎಸ್.ಎಲ್.ಸಿ. ಅಂಕಪಟ್ಟಿ | : | |
| | ಬಿ) ಚಾಲನ ಪರವಾನಿಗೆ | : | |
| | ಸಿ) ಶುಲ್ಕ ಪಾವತಿಯ ವಿವರ | : | |
| | ಡಿ) ಆಧಾರ್ ಕಾರ್ಡ್ | : | |
| | ಇ) ಶಾಲೆಯ ಮತ್ತು ಗಣ್ಯ ವ್ಯಕ್ತಿಯಿಂದ ಪಡೆದ ನಡತೆ ಪ್ರಮಾಣ ಪತ್ರಗಳು | : | |
| | ಎಫ್) ಇತರೆ ದಾಖಲೆಗಳು | : | |

**ಘೋಷಣೆ:**

(i) ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಲಾದ ಮಾಹಿತಿಯು ನನಗೆ ತಿಳಿದಿರುವಂತೆ ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ನಾನು ಈ ಮೂಲಕ ಘೋಷಿಸಿರುತ್ತೇನೆ.

(ii) ಯಾವುದೇ ಮಾಹಿತಿಗಳು ಉದ್ದೇಶ ಪೂರ್ವಕವಾಗಿ ಸತ್ಯಗಳನ್ನು ತಪ್ಪಾಗಿ ನಿರೂಪಿಸುವುದು ಅಥವಾ ಮಾಹಿತಿಯನ್ನು ಮರೆಮಾಚುವುದು ಉಮೇದುವಾರಿಕೆಯನ್ನು ರದ್ದುಗೊಳಿಸುತ್ತದೆ ಮತ್ತು ಕಾನೂನು ಕ್ರಮಗಳಿಗೆ ಗುರಿಯಾಗಿಸುತ್ತದೆ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ.

(iii) ನನ್ನನ್ನು ಯಾವುದೇ ಸರ್ಕಾರಿ/ ಅರೆಸರ್ಕಾರಿ ಇತರೆ ಸಾರ್ವಜನಿಕ ಅಥವಾ ಖಾಸಗಿ ಸಂಸ್ಥೆಯ ಸೇವೆಯಿಂದ ವಜಾಗೊಳಿಸಿರುವುದಿಲ್ಲ.

(iv) ನಾನು ಯಾವುದೇ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿಲ್ಲ ಅಥವಾ ಬಂಧಿಸಲ್ಪಟ್ಟಿಲ್ಲ ಅಥವಾ ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾಗಿಲ್ಲ ಎಂದು ಈ ಮೂಲಕ ಘೋಷಿಸಿರುತ್ತೇನೆ.

ಸ್ಥಳ : ಅಭ್ಯರ್ಥಿಯ ಸಹಿ

ದಿನಾಂಕ :

**PR-35**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-೫೯.

THAMMAIAH

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ
'ನ್ಯಾಯ ದೇಗುಲ', ಮೊದಲನೇ ಮಹಡಿ, ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು–560 027
KARNATAKA STATE LEGAL SERVICES AUTHORITY
'Nyaya Degula', 1st Floor, H. Siddaiah Road, Bengaluru–560 027.
Telephone : 080- 22111729, 22111714, Website : www.kslsa.kar.nic.in E-mail : mskar-slsa@hck.gov.in

ಸಂಖ್ಯೆ : ಕರಾಕಾಸೇಪ್ರಾ09/ಎಡಿಎಮ್/2026 ದಿನಾಂಕ:27.05.2026
No. KSLSA :

ಸದಸ್ಯ ಕಾರ್ಯದರ್ಶಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು

ಮಾನ್ಯರೇ,

**ವಿಷಯ:** ರಾಜ್ಯ ಪ್ರಾಧಿಕಾರ ಕಛೇರಿಯಲ್ಲಿ ಖಾಲಿ ಇರುವ 02 ವಾಹನ ಚಾಲಕರ ಹುದ್ದೆಗಳಿಗಾಗಿ ಅಭ್ಯರ್ಥಿಗಳ ನೇರ ನೇಮಕಾತಿ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿದ್ದು, ಅದನ್ನು ತಮ್ಮ **ನ್ಯಾಯಾಲಯ ಮತ್ತು ತಾಲ್ಲೂಕು ನ್ಯಾಯಾಲಯಗಳ ಅಂತರ್ಜಾಲದಲ್ಲಿ** Webhost **ಮಾಡಿಸುವಂತೆ ಹಾಗೂ ನೋಟಿಸ್ ಬೋರ್ಡ್‌ನಲ್ಲಿ** ಪ್ರಕಟಿಸುವಂತೆ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಈ ಕಛೇರಿಯಲ್ಲಿ ಖಾಲಿ ಇರುವ 02 ವಾಹನ ಚಾಲಕರ ಹುದ್ದೆಗಳಿಗೆ ನೇರ ನೇಮಕಾತಿ ಅರ್ಜಿಯನ್ನು ಸಲ್ಲಿಸಬಹುದೆಂದು ಅಧಿಸೂಚಿಸಲಾಗಿದೆ.

ಖಾಲಿ ಹುದ್ದೆಗಳ ವರ್ಗೀಕರಣ, ವೇತನ ಶ್ರೇಣಿ, ನೇಮಕಾತಿ ವಿಧಾನ, ಸಂದರ್ಶನ, ಅರ್ಹತೆ, ವಯಸ್ಸಿನ ಮಿತಿ, ಅರ್ಜಿ ಶುಲ್ಕ, ಸೇವಾ ಪರಿವೀಕ್ಷಣಾ ಅವಧಿ, ಆಯ್ಕೆ ವಿಧಾನ, ಸಾಮಾನ್ಯ ಸೂಚನೆಗಳು, ಅರ್ಹತಾ ಮಾನದಂಡಗಳು, ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ ಮೀಸಲಾತಿ ಇತ್ಯಾದಿಗಳ ಕುರಿತು ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್: **https://karnataka.nalsa.gov.in** ವಿವರವಾದ ಮಾಹಿತಿಯನ್ನು ನೋಡಬಹುದು.

ವಾಹನ ಚಾಲಕರ ಹುದ್ದೆಗಳ ನೇರನೇಮಕಾತಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು **ದಿನಾಂಕ:27.05.2026 ರಿಂದ ಪ್ರಾರಂಭಗೊಂಡು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:25.06.2026 ಆಗಿರುತ್ತದೆ.** ಆಸಕ್ತ ಅರ್ಹ ಅಭ್ಯರ್ಥಿಗಳು ಸದರಿ ಹುದ್ದೆಗೆ ಅರ್ಜಿ ಸಲ್ಲಿಸುವ ಅವಕಾಶವಿರುವುದರಿಂದ ಮಾಹಿತಿಯನ್ನು ಪ್ರಚಾರ ಮಾಡುವ ಅಗತ್ಯವಿರುತ್ತದೆ.

ಮೇಲ್ಕಂಡ ವೆಬ್‌ಸೈಟ್‌ನಲ್ಲಿರುವ ಅಧಿಸೂಚನೆಯನ್ನು **ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ/ಜಿಲ್ಲಾ ನ್ಯಾಯಾಲಯ ಮತ್ತು ತಾಲ್ಲೂಕು ನ್ಯಾಯಾಲಯಗಳ ಅಂತರ್ಜಾಲದಲ್ಲಿ** Webhost **ಮಾಡಿಸುವಂತೆ ಹಾಗೂ ನೋಟಿಸ್ ಬೋರ್ಡ್‌ನಲ್ಲಿ** ಪ್ರಕಟಿಸುವಂತೆ ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

27/05/2026

(ಹೆಚ್. ಶಶಿಧರ ಶೆಟ್ಟಿ)
ಸದಸ್ಯ ಕಾರ್ಯದರ್ಶಿ